## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಂ.ಜಿ.ವಿಜಯಕುಮಾರ್, ಹಿಂದಿನ ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಕರ್ಯ-3 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ವಿರುದ್ಧದ ಇಲಾಖಾ ವಿಚಾರಣೆ ಜರುಗಿಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

**ಓದಲಾಗಿದೆ:** 1. ಶ್ರೀ ಎಂ.ಜಿ.ವಿಜಯಕುಮಾರ್, ರವರಿಗೆ ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 03 ಪರವ 2013 ದಿನಾಂಕ:23-09-2013

2. ಶ್ರೀ ಎಂ.ಜಿ.ವಿಜಯಕುಮಾರ್ ಇವರ ರಕ್ಷಣಾ ಹೇಳಿಕೆ ದಿನಾಂಕ: 12-12-2013

----

**ಪ್ರಸ್ತಾವನೆ:**

ಶ್ರೀ ಎಂ.ಜಿ.ವಿಜಯಕುಮಾರ್, ಜಂಟಿ ಆಯುಕ್ತರು, (ದಕ್ಷಿಣ) ಬಿ.ಬಿ.ಎಂ.ಪಿ ಬೆಂಗಳೂರು ಇವರು ಈ ಹಿಂದೆ ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಕರ್ಯ-3 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ: 17-01-2013 ರಿಂದ 18-08-2013 ರವರೆಗೆ ಸುಮಾರು 8 ತಿಂಗಳುಗಳಿಗೂ ಹೆಚ್ಚು ಅವಧಿಗೆ ಕಛೇರಿಗೆ ಹಾಜರಾಗದೇ ಅನಧಿಕೃತ ಗೈರು ಹಾಜರಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ: 23-09-2013 ರ ಕಾರಣ ಕೇಳುವ ನೋಟಿಸ್ಸಿನ್ನೊಂದಿಗೆ ದೋಷಾರೋಪಗಳನ್ನು ಜಾರಿ ಮಾಡಿ ಆರೋಪದ ಬಗ್ಗೆ ಸಮಜಾಯಿಸಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಸದರಿ ಅಧಿಕಾರಿಯವರು ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ: 12-12-2013 ರಂದು ಸಮಜಾಯಿಸಿ ನೀಡಿ ಅವರ ಮಗನನನ್ನು ಚಿಕಿತ್ಸೆಗಾಗಿ ನಿಮಾನ್ಸ್ ಸಂಸ್ಥೆಯಲ್ಲಿ ದಾಖಲಿಸಿದ್ದು, ಆ ಅವಧಿಯಲ್ಲಿ ಗುಣಮುಖನಾಗದೆ ಇದ್ದುದರಿಂದ ಕಾಲ ಕಾಲಕ್ಕೆ ರಜೆ ಅರ್ಜಿಗಳನ್ನು ಸಲ್ಲಿಸುತ್ತಾ ಬಂದಿದ್ದು, ಸಕ್ಷಮ ಪ್ರಾಧಿಕಾರುವ ರಜೆ ಮಂಜೂರು ಮಾಡಿದೆ ಎಂದು ಭಾವಿಸಿ ದಿನಾಂಕ: 17-01-2013 ರಿಂದ 18-08-2013ರ ವರೆಗೆ ರಜೆಯ ಮೇಲೆ ಕಳೆದಿರುವುದಾಗಿ ಸಮಜಾಯಿಷಿ ನೀಡಿದ್ದಾರೆ. ಅವರು ಸಲ್ಲಿಸಿರುವ ಸಮಜಾಯಿಷಿಯು ಸಮರ್ಥನೀಯವಾಗಿಲ್ಲದೆ ಇರುವುದರಿಂದ ಈ ಪ್ರಕರಣದ ಕುರಿತಂತೆ ಸತ್ಯಾಸತ್ಯತೆಯನ್ನು ತಿಳಿಯಲು ಕೂಲಂಕಷ ಇಲಾಖಾ ವಿಚಾರಣೆಗಾಗಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಲು ಸರ್ಕಾರವು ನಿರ್ಧರಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 03 ಪರವ 2013, ಬೆಂಗಳೂರು, ದಿನಾಂಕ: 30-01-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-11 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ.ಜಿ.ವಿಜಯಕುಮಾರ್, ಜಂಟಿ ಆಯುಕ್ತರು, (ದಕ್ಷಿಣ) ಬಿ.ಬಿ.ಎಂ.ಪಿ, ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಇದೇ ನಿಮಾವಳಿಯ ನಿಯಮ-11(2) ರ ಪ್ರಕಾರ ಶ್ರೀ ವಸಂತ್ ಹೆಚ್. ಮುಳಸಾವಳಗಿ, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ, ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ&ಸಿ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ವಿಚಾರಣಾಧಿಕಾರಿಯವರು ಈ ಇಲಾಖಾ ವಿಚಾರಣೆಯನ್ನು ಕನಾಸೇ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರಲ್ಲಿ ನಿಗದಿ ಪಡಿಸಿರುವ ಕಾರ್ಯವಿಧಾನದ ಪ್ರಕಾರ ವಿಚಾರಣೆ ಜರುಗಿಸಿ ವರದಿಯನ್ನು ನಾಲ್ಕು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತ ನಿಯಮಾನುಸಾರ ನಿಗದಿತ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, (ಎ &ಇ), ಕರ್ನಾಟಕ ಬೆಂಗಳೂರು.
2. ಶ್ರೀ ಎಂ.ಜಿ. ವಿಜಯಕುಮಾರ್, ಜಂಟಿ ಆಯುಕ್ತರು, (ದಕ್ಷಿಣ) ಬಿ.ಬಿ.ಎಂ.ಪಿ ಬೆಂಗಳೂರು.
3. ಸರ್ಕಾರದ ಪ್ರಧಾನಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರಕಾರ್ಯದರ್ಶಿ (ಆಡಳಿತ)/ಉಪ ಕಾರ್ಯದರ್ಶಿ-2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರುಗಳ ಆಪ್ತ ಶಾಖೆಗೆ.
4. ಮೇಲ್ವಿಚಾರಕರು, ಗಣಕ ಕೋಶ/ಹೆಚುವರಿ ಪ್ರತಿ.